ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯಃ ಕೊಪ್ಪ
ಸಿಸಿ.465/2023

| | | | |
|---|---|---|---|
| ಸಾಕ್ಷಿಯ ಹೆಸರುಃ | ಮನೋಜ್ | ಚಾಸಾಃ | 10 |
| ತಂದೆಯ ಹೆಸರುಃ | ಮೌನೇಶ್ | ಪ್ರಾಸಾಃ | 7 |
| ವಯಸ್ಸುಃ | 24 ವರ್ಷ | | |
| ಉದ್ಯೋಗಃ | ಕೂಲಿ | | |
| ವಾಸಃ | ಹೇರೂರು | | |

ದಿನಾಂಕಃ 08/04/2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ-

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿದ್ದು ಸದರಿ ದಾಖಲೆಯು ದಿನಾಂಕಃ08/09/2022 ರ ಮಹಜರಾಗಿದ್ದು ಅದರಲ್ಲಿ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಸದರಿ ಮಹಜರನ್ನು ಈಗಾಗಲೇ ನಿಪಿ.14 ಎಂದು ಗುರುತಿಸಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-14(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ನಾನು ಪೋಲಿಸ್ ಠಾಣೆಯಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ನಿಪಿ.14 ರ ದಾಖಲೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

ನನ್ನ ಸಮಕ್ಷಮ ಯಾವುದೇ ಮಾಂಸ ಅಥವಾ ವಸ್ತುವನ್ನು ವಶಕ್ಕೆಪಡೆದಿರುವುದಿಲ್ಲ.

ಒಂದು ಪೋಟೋವನ್ನು ಸಾಕ್ಷಿಗೆ ತೋರಿಸಿದ್ದು ಅದರಲ್ಲಿ ತಾನು ಇರುವುದಾಗಿ ಗುರುತಿಸಿದ್ದರಿಂದ ಅದನ್ನು ನಿಪಿ.15, ಪಂಚರ ನೋಟಿಸ್ ನಿಪಿ.16 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-16(ಬಿ) ಎಂದು ಗುರುತಿಸಲಾಯಿತು. ನಿಪಿ.15 ಅನ್ನು ಯಾವ ಕಾರಣಕ್ಕಾಗಿ ತೆಗೆಯಲಾಯಿತು ಎಂದು ಗೊತ್ತಿಲ್ಲ.

**(**ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಬೇಕೆಂದು ಕೋರಲಾದ ಮೇರೆಗೆ ದಾಖಲೆಗಳನ್ನು ಪರಿಶೀಲಿಸಿ, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.**)**

/2/

<u>ಪಾಟೀಸವಾಲುಃ- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ</u>

ದಿನಾಂಕಃ08/09/2022 ರಂದು ಪ್ರಕರಣದ 1 ನೇ ಆರೋಪಿ ತನ್ನ ಸ್ವ ಇಚ್ಛಾ ಹೇಳಿಕೆಯಲ್ಲಿ ದಿಃ07/03/2022 ರಂದು ರಾತ್ರಿ 11 ಗಂಟೆ ಸಮಯದಲ್ಲಿ ತಾನು ಕುಂದೂರು ಸೈಟ್ ವಾಸಿ ರಮೇಶ್ ನಿಡುವಾನೆ, ಹಮೀದ್, ರವಿ ನಗರದ ವಸಂತ , ಪ್ರಕಾಶ ಸೇರಿಕೊಂಡು ಬೈಲುವಾಸಿ ಪ್ರಕಾಶ್ ಬಿನ್ ರಾಮಣ್ಣನವರ ತೋಟದ ಮೇಲುಭಾಗದ ಕಾಡಿನಲ್ಲಿ ಒಂದು ಎತ್ತಿನ ಗುಡ್ಡವನ್ನು ಕಡಿದು ಮಾಂಸ ಮಾಡಿದ್ದನ್ನು ತೋರಿಸುವುದಾಗಿ ನುಡಿದಿದ್ದರಿಂದ ಅದರಂತೆ ನನ್ನನ್ನು ಹಾಗೂ ಚಾಸಾ 9 ರವರನ್ನು ಸದರಿ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು ಮಾಹಿತಿ ಸ್ಥಳದ ಸುಮಾರು 100 ಮೀಟರ್ ಒಳಗೆ ಬಂದು ಒಂದು ಕಾಡು ಜಾತಿಯ ಮರದ ಕೆಳಗೆ ನಮ್ಮನ್ನು ಕರೆದು ಇದೆ ಸ್ಥಳದಲ್ಲಿ ನಾವು 4 ಜನ ಸೇರಿ ಒಂದು ಎತ್ತಿನ ಗುಡ್ಡವನ್ನು ಕಡಿದು ಮಾಂಸ ಮಾಡಲು ಪ್ರಯತ್ನಿಸಿದ್ದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಮಹಜರನ್ನು ನಮ್ಮಗಳ ಸಮಕ್ಷಮ 3-30 ರಿಂದ 4-30 ರವರೆಗೂ ನಿಪಿ.14 ರಂತೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ.15 ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

ಎಲ್ಲಾ ವಿಚಾರ ತಿಳಿದಿದ್ದರೂ ಸಹಾ ನಾನು ಆರೋಪಿತರಿಗೆ ಸಹಾಯ ಮಾಡುವ ಉದ್ದೇದಿಂದ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಓ.

ಸಹಿ/-
(ನಂದಿನಿ ಎಂ ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ